# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಂ/1494/2021
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 22/04/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಡಿ.ಎಸ್. ಅನಿಲಕುಮಾರ ತಂದೆ ಶ್ರೀಕಾಂತ, ದ್ವಿತೀಯ ದರ್ಜೆ ಸಹಾಯಕರು, ತಹಶೀಲ್ದಾರ ಕಛೇರಿ, ಕಲಘಟಗಿ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ ಇವರು ಧಾರವಾಡ ಜಿಲ್ಲೆ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಡಿ.ಎಸ್. ಅನಿಲಕುಮಾರ ತಂದೆ ಶ್ರೀಕಾಂತ, ದ್ವಿತೀಯ ದರ್ಜೆ ಸಹಾಯಕರು, ತಹಶೀಲ್ದಾರ ಕಛೇರಿ, ಕಲಘಟಗಿ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಸಹದೇವ ತಂದೆ ಪರಸಪ್ಪ ಹರಮಣ್ಣವರ, ಸಾ: ಎ–1, ಕ್ವಾಲಿಟಿ ಫರ್ನಿಚರ್, ಜ್ಯೋತಿ ನಗರ, ಕಲಘಟಗಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:–</u> ದೂರುದಾರರು ಕಲಘಟಗಿ ತಾಲ್ಲೂಕು ದೇವಿಕೊಪ್ಪ ಗ್ರಾಮ ರಿ.ಸ. ನಂ. 232 ಕ್ಷೇತ್ರ 1 ಎಕರೆ 21 ಗುಂಟೆ ಜಮೀನನ್ನು ಖರೀದಿಸಿದ್ದು, ಖರೀದಿ ನಂತರ ಆಗಬೇಕಾದ ಆಸ್ತಿ ಹಿಸ್ಸಾ ಬದಲ ಮಾಡಿಕೊಟ್ಟು ಆರ್. ಓ. ಸಿ. ಉತಾರ ಕೊಡಲು ಎದುರುದಾರರು ದೂರುದಾರರಿಗೆ ರೂ. 15,000/– ಕಿಮ್ಮತ್ತಿನ ಎರಡು ಸಾಗುವಾನಿ ಕಟ್ಟಿಗೆಯ ಕುರ್ಚಿಗಳನ್ನು ಲಂಚವಾಗಿ ಬೇಡಿಕೆ ಇಟ್ಟಿರುತ್ತಾರೆ. ಈ ಬಗ್ಗೆ ಮೊಬೈಲ್‌ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿರುತ್ತಾರೆ. ಸದರಿ ಲಂಚದ ರೂಪವಾಗಿ ಎರಡು ಸಾಗುವಾನಿ ಕುರ್ಚಿಗಳನ್ನು ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು

ಧಾರವಾಡ ಜಿಲ್ಲೆ ಎ.ಸಿ.ಬಿ. ಪೋಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 14/12/2016 ರಂದು ನೀಡಿರುತ್ತಾರೆ. ಈ ಬಗ್ಗೆ ಧಾರವಾಡ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 02/2016 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 14/12/2016 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಎದುರುದಾರರು ಲಂಚದ ರೂಪವಾಗಿ ಎರಡು ಸಾಗವಾನಿ ಕುರ್ಚಿಗಳನ್ನು ತಯಾರು ಮಾಡಿಸಿ ದಿನಾಂಕ 05/12/2016 ರಂದು ಮಧ್ಯಾಹ್ನದ ವೇಳೆ ಎದುರುದಾರರು ಅವರ ಆಫೀಸಿನ ಜೀಪಿನಲ್ಲಿ ದೂರುದಾರರ ಅಂಗಡಿಗೆ ಬಂದು ಕುರ್ಚಿ ರೆಡಿ ಆಗಿದೆಯೇ ಎಂದು ವಿಚಾರಿಸಿ, ಒಂದು ಕುರ್ಚಿ ರೆಡಿ ಇದ್ದುದನ್ನು ನೋಡಿಕೊಂಡು ಹೋಗಿರುತ್ತಾರೆ. ಅದೇ ದಿನ ಸಂಜೆ ಎದುರುದಾರರು ಅವರ ಕಾರಿನಲ್ಲಿ ದೂರುದಾರರ ಅಂಗಡಿಗೆ ಬಂದು ರೆಡಿ ಆಗಿರುವ ಕುರ್ಚಿಯನ್ನು ಒಯ್ಯುತ್ತೇನೆ, ಇನ್ನೊಂದನ್ನು ನಾಲ್ಕು ದಿವಸದಲ್ಲಿ ರೆಡಿ ಮಾಡಿ, ಸಾಹೇಬರಿಗೆ ಒಯ್ಯುತ್ತೇನೆ ಎಂದು ಹೇಳಿ ಕಾರಿನಲ್ಲಿ ಒಂದು ಕುರ್ಚಿಯನ್ನು ಹೇರಿಕೊಂಡು ಹೋಗಿರುತ್ತಾರೆ. ಇನ್ನೊಂದು ಕುರ್ಚಿ ರೆಡಿಯಾಗಿದ್ದು ಅದನ್ನೂ ಒಯ್ದು ಬಿಡುವ ಸಂಭವವಿದ್ದು ದೂರುದಾರರಿಗೆ ಕೊಡಲು ಮನಸ್ಸಿಲ್ಲದ್ದರಿಂದ ಎದುರುದಾರರು ಸರ್ಕಾರಿ ಕೆಲಸಕ್ಕೆ ಅಕ್ರಮವಾಗಿ ಕಾಣಿಕೆ ಎಂದು ಎರಡು ಕುರ್ಚಿಗಳನ್ನು ಕೊಡುವಂತೆ ಬೇಡಿಕೆ ಇಟ್ಟಿರುವ ಎದುರುದಾರರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನ ಬಗ್ಗೆ ದೂರುದಾರರು ಪಂಚರಿಗೆ ತಿಳಿಸಿರುತ್ತಾರೆ. ದೂರುದಾರರ ಮತ್ತು ಎದುರುದಾರರ ನಡುವೆ ದೂರು ಕೊಡುವ ಪೂರ್ವದಲ್ಲಿ ನಡೆದ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಅದನ್ನು ಲಿಪೀಕರಣ ಮಾಡಿ, ಲ್ಯಾಪ್‌ಟಾಪ್‌ಗೆ ವರ್ಗಾಯಿಸಿಕೊಂಡು ಎರಡು ತದ್ರೂಪಿ ಸಿ.ಡಿ.ಗಳಿಗೆ ವರ್ಗಾಯಿಸಿದ್ದು ಇರುತ್ತದೆ. ಸಂಭಾಷಣೆಯ ಸಿ.ಡಿ.ಗಳನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ಶ್ರೀ ಹೂವನಗೌಡ ತಂದೆ ನಿಂಗನಗೌಡ ಪಾಟೀಲ, ಎಸ್. ಡಿ.ಎ., ಬಿ.ಇ.ಓ. ಆಫೀಸ್, ಧಾರವಾಡ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ, ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡುವಂತೆ ತನಿಖಾಧಿಕಾರಿಗಳು ದೂರುದಾರರಿಗೆ ಸೂಚಿಸಿರುತ್ತಾರೆ. ದೂರುದಾರರು ತಮ್ಮೊಂದಿಗೆ ತಂದಿದ್ದ ಒಂದು ಆಫೀಸರ್ಸ್ ಕುರ್ಚಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಕುರ್ಚಿಯು ಸಾಗವಾನಿ ಕಟ್ಟಿಗೆಯಿಂದ ಮಾಡಿದ್ದು ಒಂದು ಕುರ್ಚಿಗೆ ಅಜಮಾಸ್ 15,000/- ರೂಪಾಯಿ ಕಿಮ್ಮತ್ತು ಇರುತ್ತದೆ ಎಂದು ತಿಳಿಸಿರುತ್ತಾರೆ.

ಅದು ಕಟ್ಟಿಗೆಯ ರಿವಾಲ್ವಿಂಗ್ ಛೇರ್ ಆಗಿದ್ದು ಟಚ್‌ವುಡ್ ಬಳದಿರುತ್ತಾರೆ. ಸದರಿ ಕುರ್ಚಿಯ ಹಿಂಭಾಗದಲ್ಲಿ ಸ್ವಸ್ತಿಕ್ ಮಾರ್ಕ್ ಮಾಡಿ ಅದಕ್ಕೆ ಕಪ್ಪು ಬಣ್ಣ ತುಂಬಿರುತ್ತಾರೆ. ತನಿಖಾಧಿಕಾರಿಗಳು ಸದರಿ ಮಾರ್ಕ್‌ನ್ನು ಪಂಚರಿಗೆ ತೋರಿಸಿ, ಈ ಕುರ್ಚಿಯನ್ನು ಎದುರುದಾರರು ದೂರುದಾರರಿಂದ ಪಡೆದುಕೊಂಡಲ್ಲಿ ಮಾರ್ಕ್ ಮಾಡಿದ ಕುರ್ಚಿಯನ್ನು ಗುರುತಿಸಬಹುದು ಎಂದು ತಿಳಿಸಿರುತ್ತಾರೆ. ಎದುರುದಾರರು ಕುರ್ಚಿಯನ್ನು ಪಡೆದುಕೊಂಡು ಯಾವ ವಾಹನದಲ್ಲಿ ಸಾಗಿಸುತ್ತಾರೆ ಅಂತ ಗಮನಿಸಿ ಕೂಡಲೇ ಕರವಸ್ತ್ರ ದಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ದೂರುದಾರರಿಗೆ ಮತ್ತು ನೆರಳು ಸಾಕ್ಷಿರವರಿಗೆ ತಿಳಿಸಿ ಮಧ್ಯಾಹ್ನ 2-10 ರಿಂದ 3-30 ರ ವರೆಗೆ ಧಾರವಾಡ ಎ.ಸಿ.ಬಿ. ಪೋಲೀಸ್ ಠಾಣೆಯಲ್ಲಿ ವಹಿಸಿಕೊಡುವ ಸವಿಸ್ತಾರ ಪಂಚನಾಮೆಯನ್ನು ಜರುಗಿಸಿ ಸಿ.ಡಿ.ಗಳನ್ನು ವಶಪಡಿಸಿಕೊಂಡಿರುತ್ತಾರೆ.

4) ದಿನಾಂಕ 14/12/2016 ರಂದು ದೂರುದಾರರು, ಪಂಚರು ಹಾಗೂ ಸಿಬ್ಬಂದಿಯವರು ಎರಡು ವಾಹನಗಳಲ್ಲಿ ಪೋಲೀಸ್ ಠಾಣೆಯಿಂದ ಹೊರಟು ಕಲಘಟಗಿ ಪಟ್ಟಣದ ಹೊರಭಾಗದಲ್ಲಿ ನಿಲ್ಲಿಸಲಾಗಿ ತನಿಖಾಧಿಕಾರಿಗಳು ತಮ್ಮ ವಾಹನದಲ್ಲಿ ದೂರುದಾರರು ಮತ್ತು ಪಂಚರನ್ನು ಕರೆದುಕೊಂಡು ಕಲಘಟಗಿ ಜ್ಯೋತಿ ನಗರದಲ್ಲಿರುವ ದೂರುದಾರರ ಎ-1 ಕ್ವಾಲಿಟಿ ಫರ್ನಿಚರ್ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆ. ಉಳಿದವರು ಅಲ್ಲಿಯೇ ಉಳಿದಿರುತ್ತಾರೆ. ದೂರುದಾರರ ಅಂಗಡಿಗೆ ಹೋಗಿ ಅಲ್ಲಿ ಜೀಪಿನ ಹಿಂಬದಿ ಇಟ್ಟಿದ್ದ ಎದುರುದಾರರಿಗೆ ಕೊಡಬೇಕಾದ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಮಾರ್ಕ್ ಮಾಡಿದ್ದ ಕುರ್ಚಿಯನ್ನು ಕೆಳಗಿಳಿಸಿ ದೂರುದಾರರ ತಾಬಾ ಕೊಟ್ಟು ಅವರಿಗೆ ಈ ಮುಂಚೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಗಳನ್ನು ಪುನ: ನೀಡಿ ಪಂಚರು ಮತ್ತು ತನಿಖಾಧಿಕಾರಿಗಳು ದೂರುದಾರರ ವರ್ಕ್‌ಶಾಪ್ ಹತ್ತಿರ ಅಲ್ಲಲ್ಲಿ ಕಾಯುತ್ತಾ ನಿಂತಿರುತ್ತಾರೆ. ಸ್ವಲ್ಪ ಹೊತ್ತಿನ ನಂತರ ದೂರುದಾರರು ತನಿಖಾಧಿಕಾರಿಗಳ ಹತ್ತಿರ ಬಂದು ಎದುರುದಾರರು ಫೋನ್ ಮುಖಾಂತರ ಸಂಪರ್ಕಿಸಿ "ಆರ್ಡರ್ ಕಾಪಿ ಆಗಿಲ್ಲ, ಇವತ್ತು ಮೀಟಿಂಗ್ ಇತ್ತು, ಬರಲಿಕ್ಕೆ ಆಗುವುದಿಲ್ಲ. ನಾಳೆ ಬಂದು ಆರ್ಡರ್ ಕಾಪಿ ಕೊಟ್ಟು ಕುರ್ಚಿ ತಗೊಂಡು ಹೋಗುತ್ತೇವೆ ಅಂತ ಹೇಳಿದರು" ಎಂದು ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಟ್ರ್ಯಾಪ್ ಪ್ರಕ್ರಿಯೆಯನ್ನು ಮುಂದಕ್ಕೆ ದೂಡಿ ಈ ಬಗ್ಗೆ ಸಾಯಂಕಾಲ 7-10 ರಿಂದ 7-30 ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ.

5) ದಿನಾಂಕ 15/12/2016 ರಂದು ಕಲಘಟಗಿ ಜ್ಯೋತಿ ನಗರ, ಎ -1 ಕ್ವಾಲಿಟಿ ಫರ್ನಿಚರ್ ವರ್ಕ್ಸ್ ಮಾಲಿಕರಾದ ದೂರುದಾರರ ಅಂಗಡಿಗೆ ಕರೆದುಕೊಂಡು ಹೋಗಿ ನೆರಳು ಸಾಕ್ಷಿ ಹೂವನಗೌಡ ತಂದೆ ನಿಂಗನಗೌಡ ಪಾಟೀಲ್ ಇವರು ಕಸ್ಟಮರುಗಳಂತೆ ಫರ್ನಿಚರ್ ನೋಡುತ್ತಾ ನಿಂತಿರುತ್ತಾರೆ. ತನಿಖಾಧಿಕಾರಿಗಳು, ಸಹ ಪಂಚ ಮತ್ತು ಸಿಬ್ಬಂದಿಯವರು ಅಂಗಡಿಯ ಹೊರಗೆ ಅಲ್ಲಲ್ಲಿ

ಕಾಯುತ್ತಾ ನಿಂತರು. ಸಾಯಂಕಾಲ 5-50 ಘಂಟೆಗೆ ದೂರುದಾರರ ಎ-1 ಕ್ವಾಲಿಟಿ ಫರ್ನಿಚರ್ ಅಂಗಡಿಯ ಗೇಟಿನ ಒಳಗಡೆ ಎದುರುದಾರರು ಕುರ್ಚಿ ನೋಡಲು ಬಂದಿದ್ದು ತಮ್ಮ ಹೆಸರಿಗೆ ಒಂದು, ಮತ್ತೊಂದು ಸಾಹೇಬರಿಗೆ ಅಂತ ಎರಡು ಸಾಗುವಾನಿ ಕುರ್ಚಿಗಳನ್ನು ಲಂಚದ ರೂಪವಾಗಿ ಬೇಡಿಕೆ ಇಟ್ಟಿದ್ದು ಒಂದನ್ನು ತೆಗೆದುಕೊಂಡು ಹೋಗಿದ್ದು ಇನ್ನೊಂದು ಕುರ್ಚಿಯನ್ನು ಎದುರುದಾರರು ತಮ್ಮ ಕಾರಿನಲ್ಲಿ ತೆಗೆದುಕೊಂಡು ಹೊರಟಿರುವಾಗ ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಗುರುತಿನ ಚೀಟಿ ತೋರಿಸಿ, ಉಳಿದವರ ಪರಿಚಯ ಮಾಡಿಸಿ, ದೂರಿನ ವಿಷಯ ತಿಳಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಸಾಗುವಾನಿ ಕುರ್ಚಿಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ಸದರಿ ಕುರ್ಚಿಯ ಬಗ್ಗೆ ತನಿಖಾಧಿಕಾರಿಗಳು ಖರೀದಿಸಿದ ರಸೀದಿಯನ್ನು ಹಾಜರುಪಡಿಸಲು ಕೇಳಿದಾಗ ಎದುರುದಾರರು ಯಾವುದೇ ರಸೀದಿಯನ್ನು ಹಾಜರು ಪಡಿಸಿರುವುದಿಲ್ಲ ಮತ್ತು ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ನೀಡಿರುವುದಿಲ್ಲ. ದೂರುದಾರರಿಂದ ಅಕ್ರಮವಾಗಿ ಕುರ್ಚಿಗಳನ್ನು ಪಡೆದು ಸಾಗಿಸುತ್ತಿರುವುದು ದೃಢಪಟ್ಟಿರುತ್ತದೆ. ದೂರು ನೀಡುವ ಪೂರ್ವದಲ್ಲಿ ದಿ: 23/11/2016 ರಂದು ದೂರುದಾರರೊಂದಿಗೆ ಎದುರುದಾರರು ನಡೆಸಿದ ಸಂಬಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದು ಅದನ್ನು ಲ್ಯಾಪ್‌ಟಾಪ್ ಮುಖಾಂತರ ಸಿ.ಡಿ.ಗೆ ವರ್ಗಾವಣೆ ಮಾಡಿ ಸದರಿ ಸಂಭಾಷಣೆಯನ್ನು ಶ್ರೀಮತಿ ಅನಿತಾ ನಾಯ್ಕ, ಎಫ್.ಡಿ.ಎ. ತಹಶೀಲ್ದಾರ್ ಕಛೇರಿ, ಕಲಘಟಗಿ ಇವರಿಗೆ ಕೇಳಿಸಿದಾಗ ಸದರಿಯವರು ಎದುರುದಾರರ ಧ್ವನಿಯನ್ನು ಗುರ್ತಿಸಿರುತ್ತಾರೆ. ದೂರುದಾರರಿಗೆ ಟ್ರ್ಯಾಪ್ ಕಾಲದಲ್ಲಿ ರೆಕಾರ್ಡ್ ಮಾಡಿದ ಮೊಬೈಲ್‌ನ್ನು ಹಾಜರುಪಡಿಸುವಂತೆ ತಿಳಿಸಿದಾಗ ದೂರುದಾರರು ಹಾಜರುಪಡಿಸಿದ ಮೊಬೈಲ್‌ನ್ನು ಪ್ಲೇ ಮಾಡಿ ಕೇಳಿದಾಗ ಯಾವುದೇ ಸಂಭಾಷಣೆ ಕೇಳಿ ಬರಲಿಲ್ಲ. ತನಿಖಾಧಿಕಾರಿಗಳು ಈ ಬಗ್ಗೆ ದೂರುದಾರರನ್ನು ಕೇಳಿದಾಗ ಎದುರುದಾರರು ಏಕಾಏಕಿ ಬಂದಿದ್ದರಿಂದ ಗಡಿಬಿಡಿಯಲ್ಲಿ ಮೊಬೈಲ್‌ನ ರೆಕಾರ್ಡ್ ಬಟನ್ ಒತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕಾರಣ ಯಾವುದೇ ಸಿ.ಡಿ. ಮಾಡಿರುವುದಿಲ್ಲ. ನಂತರ ದೂರುದಾರರಿಗೆ ಎದುರುದಾರರು ದಿನಾಂಕ 05/12/2016 ರಂದು ಕುರ್ಚಿ ಒಯ್ದ ಬಗ್ಗೆ ದಾಖಲಾದ ಸಿ.ಸಿ. ಕ್ಯಾಮರಾ ಫುಟೇಜ್ ಇರುವ ಸಿ.ಡಿ.ಯನ್ನು ಹಾಜರುಪಡಿಸಲು ಸೂಚಿಸಿರುತ್ತಾರೆ. ಆಗ ದೂರುದಾರರು ಸದರಿ ಸಿ.ಡಿ.ಯನ್ನು ಹಾಜರುಪಡಿಸಿದ್ದು ಅದನ್ನು ಕಂಪ್ಯೂಟರ್‌ನಲ್ಲಿ ಹಾಕಿ ಪ್ಲೇ ಮಾಡಿ, ಎದುರುದಾರರ ಸಹೋದ್ಯೋಗಿ ಶ್ರೀಮತಿ ಅನಿತಾ ನಾಯ್ಕರವರಿಗೆ ತೋರಿಸಿರುತ್ತಾರೆ. ಎದುರುದಾರರು ತಮ್ಮ ಕಾರಿನಲ್ಲಿ ಕಟ್ಟಿಗೆ ಛೇರ್‌ನ್ನು ಸಾಗಿಸುವ ದೃಶ್ಯಾವಳಿ ಇದ್ದು, ಸದರಿ ಸಿ.ಸಿ. ಕ್ಯಾಮರಾ ಫೂಟೇಜ್‌ನಲ್ಲಿ ಕಾಣುವ ವ್ಯಕ್ತಿ ತಮ್ಮ ಕಛೇರಿಯಲ್ಲಿ ಎಸ್. ಡಿ. ಎ. ಅಂತ ಕೆಲಸ ಮಾಡುವ ಅನಿಲ್ ಕುಮಾರ್‌ರವರನ್ನು

ಗುರ್ತಿಸಿರುತ್ತಾರೆ. ಸದರಿ ಸಿ.ಸಿ. ಕ್ಯಾಮರಾ ದೃಶ್ಯಾವಳಿ ಇರುವ ಸಿ.ಡಿ.ಯನ್ನು ತದ್ರೂಪಿ ಸಿ.ಡಿ.ಗೆ ವರ್ಗಾಯಿಸಿ ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ನಂತರ ಸದರಿ ಪಂಚನಾಮೆಯನ್ನು ಮುಂದುವರೆಸಿ ಹುಬ್ಬಳ್ಳಿ ನಗರದ ನವನಗರದಲ್ಲಿ ಎದುರುದಾರರ ಮನೆಗೆ ಕರೆದುಕೊಂಡು ಹೋಗಿ ಹಾಲ್‌ನಲ್ಲಿರುವ ಚೇರ್‌ನ್ನು ತೋರಿಸಿದ್ದು, ಅದನ್ನು ದೂರುದಾರರು ಪರಿಶೀಲಿಸಿ ಅದರ ಮೇಲೆ ಅಂಟಿಸಿದ ಅಂಗಡಿಯ ಚೀಟಿಯನ್ನು ನೋಡಿ ಗುರುತಿಸಿರುತ್ತಾರೆ. ಹೀಗೆ ಲಂಚವಾಗಿ ಪಡೆದ ಎರಡು ಸಾಗುವಾನಿ ಕುರ್ಚಿಗಳನ್ನು ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲದಲ್ಲಿ ದೂರುದಾರರು ಹಾಜರುಪಡಿಸಿದ ಅರ್ಜಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ.

6) ಸದರಿ ಕುರ್ಚಿಗಳ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

7) ಎದುರುದಾರರು ದಿನಾಂಕ 29/12/2021 ರಂದು ಸಮಜಾಯಿಷಿಯನ್ನು ಸಲ್ಲಿಸಿದ್ದು ಸದರಿ ಸಮಜಾಯಿಷಿಯಲ್ಲಿ "ನ್ಯಾಯಾಲಯದಲ್ಲಿ ಆದ ಆದೇಶವನ್ನು ಅಮಲಿಗಾಗಿ ಕಲುಹಿಸುವುದು ನನ್ನ ಕಾರ್ಯವಾಗಿದ್ದು ಇರುತ್ತದೆ. ಅಲ್ಲದೆ ಉತ್ತಮ ಗುಣಮಟ್ಟದ ಬೇಸನ್ನು ಅಳವಡಿಸಲು ಶ್ರೀ ಸಹದೇವ ಪರಸಪ್ಪ ಹನಮಣ್ಣವರ ಸಾಕೀನ ಕಲಘಟಗಿ ಇವರಿಗೆ ಸೂಚಿಸಿದಾಗ ಅವರ ನಮ್ಮ ನಡುವೆ ಮಾತಿನ ಚಕಮಕಿಯಾಗಿದ್ದು ಸದರ ಅವಧಿಯಲ್ಲಿ ಅವರ ಕೆಲಸದ ಬಗ್ಗೆ ಕಂದಾಯ ನಿರೀಕ್ಷಕರು ವಿಳಂಬ ಮಾಡಿರುವುದರಿಂದ ತಪ್ಪು ಕಲ್ಪನೆಯಿಂದ ಮೋಸದಿಂದ ಸದರ ಪ್ರಕರಣದಲ್ಲಿ ನನ್ನನ್ನು ಸಿಗಿಸಿದ್ದು ಇರುತ್ತದೆ. ನಾನು ಯಾವುದೇ ಲಂಚದ ಬೇಡಿಕೆಯನ್ನು ಇಟ್ಟಿರುವುದಿಲ್ಲಾ ಹಾಗೂ ಸರಕಾರಿ ಕೆಲಸದಲ್ಲಿ ನಿಯಮಾವಳಿಗಳನ್ನು ಮೀರಿ ದುರ್ನಡತೆಯನ್ನು ಎಸಗಿರುವುದಿಲ್ಲಾ" ಎಂದು ಉಲ್ಲೇಖಿಸಿರುತ್ತಾರೆ. ಈ ಬಗ್ಗೆ ಇಲಾಖಾ ವಿಚಾರಣೆಯೂ ಸಹ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಇವರ ಹತ್ತಿರ ನಡೆದದ್ದು ಇರುತ್ತದೆ ಎಂದು ಉಲ್ಲೇಖಿಸಿದ್ದು ಇರುತ್ತದೆ. ಈ ಬಗ್ಗೆ ಎದುರುದಾರರಿಗೆ ಹಲವಾರು ಬಾರಿ ಮೊಬೈಲ್ ಮುಖಾಂತರ ಹಾಗೂ ಸ್ಥಳೀಯ ದೂರವಾಣಿ ಮುಖಾಂತರ ಸಂಪರ್ಕಿಸಿ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಲು ಪ್ರಯತ್ನಿಸಿದರೂ ಸಹ ಸದರಿಯವರು ದೂರವಾಣಿ ಕರೆಯನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ. ಸದರಿ ಇಲಾಖಾ ವಿಚಾರಣೆಯ ಪ್ರಕರಣ ಸಂಖ್ಯೆಯನ್ನಾಗಲೀ, ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನಾಗಲೀ ತಮ್ಮ ಸಮಜಾಯಿಷಿಯ ಜೊತೆ ಅಥವಾ ನಂತರವೂ ಸಹ ಈ ಕಛೇರಿಗೆ ಸಲ್ಲಿಸಿರುವುದಿಲ್ಲ.

8) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

9) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

10) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26/4/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು.